‘ನಾನು ಈಗಲೇ ಶಿರೂರಿಗೆ ಹೋಗಬೇಕು. ಉಳವರೆ ನೋಡಬೇಕು. ಎಲ್ಲೆಲ್ಲಿ ಯಾರ್‍ಯಾರು ನೊಂದಿದ್ದಾರೆ, ಅವರಿಗೆಲ್ಲ ನಾನು ಸಮಾಧಾನ ಹೇಳಬೇಕು. ಮನೆಯಿಲ್ಲದವರಿಗೆ ಒಂದು ಮನೆ, ಊಟವಿಲ್ಲದವರಿಗೆ ಊಟ ಒದಗಿಸಬೇಕು ನಾವು. ಏನೋ ಒಂದು ವ್ಯವಸ್ಥೆ, ಎಲ್ಲರೂ ಒಟ್ಟಾದರೆ ಅದೇನು ಮಹಾ? ಬರುತ್ತೀರೇನು? ನಿಮ್ಮ ಕಾವ್ಯಮೀಮಾಂಸೆಗೂ ಹೊಸ ತಿರುವು ಸಿಕ್ಕಬಹುದು’ ಎಂದರು. ನಾನೂ ಎದ್ದೆ. ‘ಏಳಿ, ತಡ ಮಾಡುವುದೇಕೆ? ಪ್ರವಾಹದಲ್ಲಿ ಕೊಚ್ಚಿ ಹೋದ ಜೀವಗಳು ಇನ್ನೂ ಒಂದೆರಡಾದರೂ ಉಸಿರಾಡುತ್ತಿರಬಹುದು. ಅವರನ್ನಾದರೂ ಉಳಿಸೋಣ. ಹೊರಡುವುದೇ ಸೈ’ ಎಂದೆ.

ನಮ್ಮಿಬ್ಬರನ್ನು ನಿಯಂತ್ರಿಸಲು ಕಾಡಮೂಲೆಯ ಕೆಲಸಗಾರರಿಗೆ ಆ ರಾತ್ರಿ ಸಾಕುಬೇಕಾಯಿತು. ‘ಬೆಳಿಗ್ಗೆ ಹೊರಟರೆ ನಾವೂ ಬರುತ್ತೇವೆ’ ಎಂದು ಹೇಳಿ ನಮ್ಮನ್ನು ಮಕ್ಕಳಂತೆ ಸಂತೈಸಿದರು. ಇವೆಲ್ಲ ನಡೆಯುವಾಗ ಅಬ್ಬೆ ತಮ್ಮ ಸುರುಳಿ ಹಾಸಿಗೆ ಬಿಚ್ಚಿ ಮಲಗಿದ್ದರು. ಅವರಿಗೆ ಸರಿಯಾಗಿ ನಿದ್ದೆ ಬಂದಂತೆ ಕಾಣಲಿಲ್ಲ. ‘ಏನು ನಡೆಯುತ್ತಿದೆ’ ಎಂದು ವಿಚಾರಿಸಿಕೊಂಡು ನಮ್ಮತ್ತ ನೋಡಿ ದೀರ್ಘ ಉಸಿರುಬಿಟ್ಟು ಮತ್ತೆ ನಿದ್ದೆಹೋದರು. ರಾನಭ ತಮ್ಮ ಜೀಪಿನ ಚಾಲಕ ಗೋವಿಂದನನ್ನು ಕರೆದು ಸೂರ್ಯೋದಯವಾಗುತ್ತಿರುವಂತೆ ಹೊರಡಲು ಸಿದ್ಧವಾಗಿರಬೇಕೆಂದು ಕಟ್ಟಪ್ಪಣೆ ಮಾಡಿದರು.

ಮರುದಿನ ಬೆಳಿಗ್ಗೆ ಲಗುಬಗೆಯಲ್ಲಿ ಎಲ್ಲರೂ ತಿಂಡಿ ತಿಂದು ಮುಗಿಸಿದೆವು. ರಾನಭ ಮುಂದೆ ಹೋಗಿ ತಮ್ಮ ಜೀಪು ಪ್ರಯಾಣಕ್ಕೆ ಸಿದ್ಧವಾಗಿದೆಯೇ ಎಂದು ನೋಡಿ ಬಂದರು. ಅವರ ವಿಶ್ವಾಸದ ಕೆಲವು ಬಂಟರು ಹಿಂದುಗಡೆ ಕುಳಿತಿರಬೇಕೆಂದು ತಾಕೀತು ಮಾಡಿದರು. ‘ಹೋಗಿಬರುತ್ತೇವೆ’ ಎನ್ನಲು ಅಬ್ಬೆಯನ್ನು ಕೂಗಿದರು. ಅಬ್ಬೆ ಒಳಗೆಲ್ಲಿಂದಲೋ ‘ಬಂದೇ’ ಎಂದು ಮರುದನಿಗೊಟ್ಟರು. ಜೊತೆಯಲ್ಲೇ ‘ತಡೆ ಮಾಣಿ, ಬರುತ್ತಿದ್ದೇನೆ’ ಎಂದುದು ಕೇಳಿಸಿತು. ಹಿಂತಿರುಗಿ ನೋಡಿದರೆ ಒಂದಷ್ಟು ಬಟ್ಟೆ, ತಿಂಡಿ, ಅಕ್ಕಿ, ಬೇಳೆ, ಪಾತ್ರೆ ಹಿಡಿದು ಏದುಸಿರು ಬಿಡುತ್ತಾ ಅಬ್ಬೆ ಹೊರ ಬಂದರು. ಅವರು ಕಟ್ಟಿಟ್ಟಿದ್ದ ನಾಕಾರು ಮೂಟೆಗಳನ್ನು ಹೊರ ತರಲು ಕೆಲಸಗಾರರನ್ನು ಕೂಗಿ ಕರೆದರು. ಓಡಿ ಹೋಗಿ ಕೆಲಸಗಾರರು ಆ



ಮೂಟೆಗಳನ್ನು ಒಳಕೋಣೆಯಿಂದ ಹೊತ್ತು ತಂದರು. ಅಚ್ಚರಿಯಿಂದ ರಾನಭ ‘ಇವೆಲ್ಲಾ ಯಾಕೆ?’ ಎಂದರು. ‘ಮತ್ತೆ ಅಲ್ಲಿ ನೀವು ಕಷ್ಟದಲ್ಲಿರುವವರಿಗೆ ಅಡುಗೆ ಮಾಡಿ ಬಡಿಸುವುದು ಹೇಗೆ ಹುಚ್ಚಪ್ಪಂದಿರಾ?’ ಎಂದು ನಮ್ಮಿಬ್ಬರಿಗೂ ತಲೆಗೊಂದು ಸಣ್ಣ ಏಟು ಕೊಟ್ಟರು – ಮಗ್ಗಿ ತಪ್ಪುವ ಎಳೆಯ ಮಕ್ಕಳಿಗೆ ಏಟು ಕೊಟ್ಟಂತೆ. ನಮ್ಮಿಬ್ಬರಿಗೂ ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳಲು ಕೈಸನ್ನೆಯಿಂದಲೇ ಸೂಚಿಸಿ, ಈ ಇಬ್ಬರು ಅವಿವೇಕಿ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಮಾಡಬೇಕಾದ ಹೊಣೆ ತನ್ನ ಮೇಲಿದೆ ಎನ್ನುವಂತೆ ಗೋವಿಂದನ ಪಕ್ಕದ ಮುಂದಿನ ಸೀಟಿನಲ್ಲಿ ಕುಳಿತು ‘ಹಿಲ್ಲೂರ ಹಾದಿಯಲ್ಲಿ ಹೋಗು, ಹುಷಾರು’ ಎಂದರು.

●